ನಾಗರಾಜ ವಸ್ತಾರೆ

# ಪದ, ಕಾಗುಣಿತ, ವ್ಯಾಕರಣ... ಇತ್ಯಾದಿ


ಕುಣಾಲಿ ಎಂಬ ಈ ಅಜೀಬು ಹೆಣ್ಣು ನನ್ನದೇ ಒಂದು ಅಜೀಬು ಸನ್ನಿವೇಶದಲ್ಲಿ ಬಲು ಅನಾಮತ್ತಾಗಿ ಸಿಕ್ಕಳೆಂಬುದೂ ಅಜೀಬಿನ ವಿಷಯವೇನೆ!

ಕತೆಯನ್ನು ಈ ವಾಕ್ಯದಲ್ಲಿರುವಂತೆಯೇ, ಮೂರು ಅಜೀಬೆನಿಸುವ ಸಂಗತಿಗಳ ಮುಖೇನ ಹೇಳಿಬಿಡುತ್ತೇನೆ. ಪದ, ವಾಕ್ಯ, ವ್ಯಾಕರಣ, ಕಾಗುಣಿತ... ಇತ್ಯಾದಿಗಳು ಇದ್ದಿದ್ದೇ... ತಂತಾವೇ ಉಂಟಾಗಬಹುದು.

**ಒಂದು:**

***(i)***

ಕುಣಾಲಿ ಅನ್ನುವುದು ಕುಣಾಲ ಎಂಬುದರ ಸ್ತ್ರೀರೂಪವಂತೆ. ಹೀಗೇ ಅವಳೇ ಒಮ್ಮೆ ಹೇಳಿಕೊಂಡಿದ್ದಳು: 'ಸರ್ – ಜೀ... ಕುಣಾಲ್ ಅನ್ನೋದು ಹುಡುಗನ ಹೆಸರಲ್ಲವಾ? ಅದನ್ನ ಹುಡುಗಿಯದಾಗಿ ಮಾಡೋ ನೆಪದಲ್ಲಿ ನನ್ನಮ್ಮ ನನ್ನನ್ನ ಕುಣಾಲಿ ಅಂತ ಕರೆದುಬಿಟ್ಟಳು... ಏನು ಗೊತ್ತಾ, ಸರ್–ಜೀ... ಕುಣಾಲ ಅಂದರೆ ಸಂಸ್ಕೃತದಲ್ಲಿ ತಾವರೆ ಹೂ ಅನ್ನೋ ಅರ್ಥ.



ಚಿತ್ರಗಳು: ಎಸ್.ವಿ. ಹೂಗಾರ